**SC No. 218/2023**
**C/w SC No.130/2025**

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

**S.C. No. 218/2023**
**C/w SC No.130/2025**

| ಸಾಕ್ಷಿಯ ಹೆಸರು | ಶ್ರೀ. ಎಂ.ಮುರುಗೇಂದ್ರಯ್ಯ | ಚಾಸಾಃ | ಪ್ರಾಸಾಃ |
|---|---|---|---|
| ತಂದೆಯ ಹೆಸರು | ಎಂ.ಚನ್ನಯ್ಯ | 1 | 2 |
| ವಯಸ್ಸು | 50 ವರ್ಷ | ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು. ದಿನಾಂಕ **24.04.2026.** | |
| ಉದ್ಯೋಗ | ಸಹಾಯಕ ಪೊಲೀಸ್ ಆಯುಕ್ತ, ಸಂಪಿಗೆ ಹಳ್ಳಿ ಉಪ ವಿಭಾಗ | | |
| ವಾಸ ಸ್ಥಳ | ಜಾಲಹಳ್ಳಿ, ಬೆಂಗಳೂರು | | |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ನಾನು ಸೆಪ್ಟೆಂಬರ್ 2019 ರಿಂದ ಏಪ್ರಿಲ್ 2021 ರವರೆಗೆ CCB OCW ಘಟಕದಲ್ಲಿ ಪಿ.ಐ ಆಗಿ ಕೆಲಸ ನಿರ್ವಹಿಸಿದ್ದೇನೆ. ದಿನಾಂಕ 15.01.2021 ರಂದು ಸಂಜೆ 6.10 ರ ಸುಮಾರಿಗೆ ನನಗೆ ಬಂದ ಖಚಿತ ಬಾತ್ಮಿಯ ಮೇರೆಗೆ ನಾನು ಕೂಡಲೇ ಇಬ್ಬರು ಪಂಚರಾದ ಕಾರ್ತಿಕ್ ಮತ್ತು ಕೌಶಿಕ್ ರವರನ್ನು ನೋಟೀಸ್ ನೀಡಿ ಕರೆಸಿಕೊಂಡಿದ್ದು, ಸದರಿ ನೋಟೀಸ್ ಗಳನ್ನು ನಿಶಾನೆ ಪಿ2 ಮತ್ತು ಸಹಿಯನ್ನು ನಿಶಾನೆ ಪಿ2(ಎ) ಎಂದು ಗುರುತಿಸಲಾಯಿತು. ನಮ್ಮ ಸಿಬ್ಬಂದಿಗಳಾದ ಗಿರೀಶ್, ರವಿಕುಮಾರ್, ಅರುಣ್ ಕುಮಾರ್, ನರಸಿಂಹಮೂರ್ತಿ, ಗೋಪಾಲ್ ಮತ್ತು ಯೋಗಾನಂದ್, ಹರೀಶ್ ಹಾಗೂ ಪಂಚರಿಗೆ ಬಾತ್ಮಿಯ ಬಗ್ಗೆ ತಿಳಿಸಿದ್ದು, ನಂತರ ನಾವೆಲ್ಲರೂ ಎರಡು ವಾಹನಗಳಲ್ಲಿ ಬಾತ್ಮಿ ಬಂದ ಸ್ಥಳ ಅಂಜನಾ ನಗರ, ಮಾಗಡಿ ರಸ್ತೆಗೆ ಸಂಜೆ 6.40 ಕ್ಕೆ ಠಾಣೆ ಬಿಟ್ಟು 7.30 ಗಂಟೆಗೆ ತಲುಪಿದೆವು. ನಂತರ ಮರೆಯಲ್ಲಿ ನಿಂತು ಗಮನಿಸಿದಾಗ ಸದರಿ ಸ್ಥಳದಲ್ಲಿ ನಾಲ್ಕೈದು ಜನ ವ್ಯಕ್ತಿಗಳು ಮಾರಕಾಸ್ತ್ರಗಳನ್ನು ಹಿಡಿದುಕೊಂಡು ಸಾರ್ವಜನಿಕರನ್ನು ದೋಚಲು ಹೊಂಚು ಹಾಕುತ್ತಿದ್ದು, ನಾವುಗಳು ಅವರನ್ನು ಸುತ್ತುವರೆದು ಹಿಡಿದುಕೊಂಡಾಗ ನಾಲ್ಕು ಜನ ಸಿಕ್ಕಿದ್ದು, ಒಬ್ಬ ಓಡಿಹೋದ. ನಾನು ಹಿಡಿದುಕೊಂಡ ಆಸಾಮಿಯ ಹೆಸರು ವಾಸು ಅಲಿಯಾಸ್ ಅಂದ್ರಹಳ್ಳಿ ವಾಸು ಎಂದು ಹೇಳಿದ. ಆತನ ಬಳಿ ಒಂದು ಲಾಂಗ್ ದೊರೆತಿದ್ದು ವಶಕ್ಕೆ ಪಡೆದೆ. ಪಿಐ ಗಿರೀಶ್ ರವರು ಹಿಡಿದ ವ್ಯಕ್ತಿಯ ಹೆಸರು ವಿಕಾಸ್ ಆಗಿದ್ದು, ಆತನ ಬಳಿ ಲಾಂಗ್ ಇತ್ತು. ಸಿಬ್ಬಂದಿ ರವಿಕುಮಾರ್ ಹಿಡಿದ ವ್ಯಕ್ತಿಯ ಹೆಸರು ಚಂದ್ರಶೇಖರ್ ಆಗಿದ್ದು, ಆತನ ಬಳಿ

ದೊಣ್ಣೆ ಇತ್ತು. ಸಿಬ್ಬಂದಿ ಅರುಣ್ ಕುಮಾರ್ ರವರು ಹಿಡಿದ ವ್ಯಕ್ತಿಯ ಹೆಸರು ಮಹೇಶ್ ಆಗಿದ್ದು, ಆತನ ಬಳಿ ಒಂದು ದೊಣ್ಣೆ ಮತ್ತು ಖಾರದ ಪುಡಿ ಪೊಟ್ಟಣ ಇತ್ತು. ಓಡಿಹೋದ ವ್ಯಕ್ತಿಯ ಹೆಸರು ಲೋಕೇಶ್ ಎಂದು ತಿಳಿಯಿತು. ನಂತರ ಈ ಬಗ್ಗೆ ದೊರೆತ ಆಯುಧಗಳನ್ನು ಪಂಚನಾಮೆ ಮುಖಾಂತರ ವಶ ಪಡಿಸಿಕೊಂಡು ಬಿಳಿ ಬಟ್ಟೆಯಿಂದ ಸೀಲ್ ಮಾಡಿದೆವು. ಈ ಬಗ್ಗೆ ಪಂಚನಾಮೆಯನ್ನು ರಾತ್ರಿ 7.40 ರಿಂದ 8.30 ಗಂಟೆಯವರೆಗೆ ಸ್ಥಳದಲ್ಲಿ ತಯಾರಿಸಿದ್ದು, ಅದರಲ್ಲಿರುವ ಸಹಿಯನ್ನು ನಿಶಾನೆ ಪಿ1(ಬಿ) ಎಂದು ಗುರುತಿಸಲಾಯಿತು. ಮು ಮಾ 1 ರಿಂದ 5 ಅನ್ನು ಸಾಕ್ಷಿ ಗುರುತಿಸಿರುತ್ತಾರೆ. ನಂತರ ಪೊಲೀಸ್ ಠಾಣೆಗೆ ಹೋಗಿ ವಿವರವಾದ ದೂರನ್ನು ನೀಡಿ ಆರೋಪಿತರನ್ನು ಮತ್ತು ಮುದ್ದೇಮಾಲುಗಳನ್ನು ವಶಕ್ಕೆ ಕೊಟ್ಟಿರುತ್ತೇವೆ. ಸದರಿ ದೂರನ್ನು ನಿಶಾನೆ ಪಿ3 ಮತ್ತು ಸಹಿಯನ್ನು ನಿಶಾನೆ ಪಿ3(ಎ) ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

2. ದಿನಾಂಕ 18.01.2021 ರಂದು ನಮ್ಮ ಸಿಬ್ಬಂದಿ 5 ನೇ ಆರೋಪಿಯನ್ನು ನನ್ನ ಸಮಕ್ಷಮ ಹಾಜರು ಪಡಿಸಿದ್ದು, ಆತನನ್ನು ವರದಿಯೊಂದಿಗೆ ಪಿಐ ಬ್ಯಾಡರಹಳ್ಳಿ ಅವರ ಮುಂದೆ ಹಾಜರು ಪಡಿಸಿರುತ್ತೇನೆ. ಸದರಿ ವರದಿಯನ್ನು ನಿಶಾನೆ ಪಿ4 ಮತ್ತು ಸಹಿಯನ್ನು ನಿಶಾನೆ ಪಿ4(ಎ) ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ 5 ನೇ ಆರೋಪಿತರ ಪರ ಶ್ರೀ. ಹೆಚ್.ಕೆ. ವಕೀಲರಿಂದ :</u>

3. ನನಗೆ ಫೋನ್ ಮುಖಾಂತರ ಮಾಹಿತಿ ಬಂದಿತು. ಪಂಚರನ್ನು ನಮ್ಮ ಸಿಬ್ಬಂದಿಗಳು ಕರೆತಂದರು. ಎಲ್ಲಿಂದ ಎಂದು ಗೊತ್ತಿಲ್ಲ. ನಮ್ಮ ಸಿಬ್ಬಂದಿಗಳು ಪಂಚರನ್ನು ಕರೆತಂದಿಲ್ಲ, ಆ ಕಾರಣದಿಂದ ನನಗೆ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳ CCB ಯಿಂದ 6-7 ಕಿ.ಮೀ ದೂರದಲ್ಲಿತ್ತು. ಅಲ್ಲಿಗೆ ತಲುಪಲು 40-50 ನಿಮಿಷ ಹಿಡಿಯಿತು. ನಾವು ಸುಮಾರು 20 ರಿಂದ 30 ಅಡಿ ದೂರದಲ್ಲಿ ನಿಂತು ಗಮನಿಸಿದೆವು. ಯಾವ ಆರೋಪಿಯನ್ನು ಯಾರು ಹಿಡಿದೆವು ಮತ್ತು ಯಾರ ಬಳಿ ಯಾವ ಆಯುಧಗಳು ಇದ್ದವು ಎಂದು ದೂರಿನಲ್ಲಿ ಹೇಳಲು ತೊಂದರೆ ಇರಲಿಲ್ಲ. ನಾವು ಆರೋಪಿತರನ್ನು ಆ ಸ್ಥಳದಲ್ಲಿ ಹಿಡಿದಿಲ್ಲ ಮತ್ತು ಆ ಕಾರಣದಿಂದ ಆ ಮಾಹಿತಿಯನ್ನು ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಬಳಿ ಮು ಮಾ 1 ರಿಂದ 5 ಇರಲಿಲ್ಲ ಮತ್ತು ನಮ್ಮ ಠಾಣೆಯ ಬೇರೆ ಪ್ರಕರಣಕ್ಕೆ

ಸಂಬಂಧಪಟ್ಟಂತೆ ಇದ್ದ ಮು ಮಾ 1 ರಿಂದ 5 ಅನ್ನು ಈ ಪ್ರಕರಣಕ್ಕೆ ಸೇರಿಸಿದ್ದೇವೆ ಎಂದರೆ ಸರಿಯಲ್ಲ. ಸ್ಥಳದಲ್ಲಿ ಬೀದಿ ದೀಪದ ವ್ಯವಸ್ಥೆ ಇರಲಿಲ್ಲ ಕತ್ತಲೆ ಇತ್ತು ಎಂದರೆ ಇರಬಹುದು. ಕತ್ತಲೆ ಇದ್ದುದರಿಂದ ಯಾವ ಆರೋಪಿ ಓಡಿಹೋದ ಎಂದು ಗುರುತಿಸಲು ಆಗುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರನ್ನು ಸರ್ಕಾರಿ ವಾಹನದಲ್ಲಿ ಬ್ಯಾಡರಹಳ್ಳಿ ಠಾಣೆಗೆ ಕರೆದುಕೊಂಡು ಹೋದೆವು. ಖಾಸಗಿ ವಾಹನದ ನಂಬರ್ ಗೊತ್ತಿಲ್ಲ. ಖಾಸಗಿ ವಾಹನವನ್ನು ಆ ದಿನ ತೆಗೆದುಕೊಂಡು ಹೋಗದೇ ಇದ್ದ ಕಾರಣ ಅದರ ನಂಬರ್ ಗೊತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾರೂ ಸ್ಥಳದಲ್ಲಿ ಇರಲಿಲ್ಲ ಮತ್ತು ಮನೆಯಲ್ಲಿದ್ದವರನ್ನು ಕರೆ ತಂದಿದ್ದೇವೆ ಎಂದರೆ ಸರಿಯಲ್ಲ. ಮು ಮಾ 1 ರಿಂದ 5 ಅನ್ನು ಅವರಿಂದ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. 5 ನೇ ಆರೋಪಿ ಸ್ಥಳದಲ್ಲಿ ಇರಲಿಲ್ಲ ಮತ್ತು ಈ ಕೇಸ್ ಹಾಕಲು 5 ಜನ ಬೇಕು ಎಂದು ಆತನನ್ನು ಸೇರಿಸಿದ್ದೇವೆ ಎಂದರೆ ಸರಿಯಲ್ಲ. ಈ ಕೇಸ್ ಗೆ ಅನುಕೂಲವಾಗುವಂತೆ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯನ್ನು ಠಾಣೆಯಲ್ಲಿ ಬರೆದಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ 1 ಮತ್ತು 2 ನೇ ಆರೋಪಿತರ ಪರ ಶ್ರೀಮತಿ. ಎಂ.ಎಂ. ವಕೀಲರಿಂದ :</u>

1 ಮತ್ತು 2 ನೇ ಆರೋಪಿತರನ್ನು ಸ್ಥಳದಲ್ಲಿ ಹಿಡಿದಿಲ್ಲ ಮತ್ತು ಅವರಿಂದ ಯಾವುದೇ ವಸ್ತುಗಳನ್ನು ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಮನೆಯಲ್ಲಿದ್ದವರನ್ನು ಕರೆತಂದು ಸುಳ್ಳು ಕೇಸ್ ಹಾಕಿದ್ದೇವೆ ಎಂದರೆ ಸರಿಯಲ್ಲ. ಉಳಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ಹೇಳಿರುತ್ತಾರೆ.

<u>ಮರು ವಿಚಾರಣೆ ಇಲ್ಲ</u>

(ಈ ಸಾಕ್ಷಿದಾರರನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಮಾಡಿದ್ದು ಅದನ್ನು ಯಥಾವತ್ತಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ,

ಸಹಿ/-
**(ಶ್ರೀಮತಿ. ಬಿ.ಎಸ್.ರೇಖಾ )**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.